# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 676

ಸದಸ್ಯರ ಹೆಸರು : ಶ್ರೀ ಪ್ರತಾಪ ಸಿಂಹ ನಾಯಕ್ .ಕೆ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 25-09-2020

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚೆಗೆ ರಾಜ್ಯದಲ್ಲಿ ಹೆಚ್ಚುತ್ತಿರುವ ವಾಹನ ಅಪಘಾತಗಳಲ್ಲಿ ಶೇ.89 ಪ್ರತಿಶತ ಅಪಘಾತಗಳಲ್ಲಿ ನಿರ್ಲಕ್ಷ್ಯ, ಬೇಜವಾಬ್ದಾರಿ ಮತ್ತು ಸರಿಯಾದ ತರಬೇತಿಯಿಲ್ಲದ ವಾಹನ ಚಾಲಕರಿಂದ ಘಟಿಸುತ್ತಿದೆ ಎಂಬುದಾಗಿ ಸಮೀಕ್ಷಾ ವರದಿಯಿಂದ ತಿಳಿದುಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? ಇಂತಹ ಅಪಘಾತಗಳನ್ನು ತಡೆಯಲು ಪರಿಣಾಮಕಾರಿಯಾದ ನಿಯಮಗಳನ್ನು ರೂಪಿಸಲಾಗಿದೆಯೇ? | ರಸ್ತೆ ಅಪಘಾತ ಕಡಿಮೆಗೊಳಿಸುವಲ್ಲಿ ಸಾರಿಗೆ ಇಲಾಖೆ ಸತತ ಪ್ರಯತ್ನ ಮಾಡುತ್ತಿದ್ದು, ಅದರಲ್ಲಿ ಪ್ರಮುಖವಾಗಿ ಚಾಲನಾ ಅನುಜ್ಞಾಪತ್ರ ನೀಡುವಲ್ಲಿ ಹಲವಾರು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಸಾರಥಿ-4 ತಂತ್ರಾಂಶದಲ್ಲಿ ಚಾಲನಾ ಅನುಜ್ಞಾಪತ್ರ ನೀಡುವ ವ್ಯವಸ್ಥೆ ಸಂಪೂರ್ಣ ಗಣಕೀಕರಣವಾಗಿದ್ದು, ಆನ್‌ಲೈನ್ ವ್ಯವಸ್ಥೆಯಲ್ಲಿ ಚಾಲನಾ ಅನುಜ್ಞಾಪತ್ರ ನೀಡುವ ವ್ಯವಸ್ಥೆಯನ್ನು ಈಗಾಗಲೇ ರಾಜ್ಯಾದ್ಯಂತ ಜಾರಿಗೊಳಿಸಲಾಗಿದೆ. |
| (ಆ) | ಸಮರ್ಪಕವಾದ ತರಬೇತಿ ಹೊಂದದ ವಾಹನ ಚಾಲಕರಿಗೆ ಚಾಲನಾ ಪರವಾನಗಿ ನೀಡುವ ಸಂದರ್ಭದಲ್ಲಿ ಅಧಿಕಾರಿಗಳು ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಲು ಕೈಗೊಂಡಿರುವ ಕ್ರಮಗಳೇನು? | ಈಗಾಗಲೇ ರಾಜ್ಯದ ಕಲಬುರಗಿ, ಮೈಸೂರು, ಬೆಂಗಳೂರಿನ ಜ್ಞಾನಭಾರತಿ ಮತ್ತು ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಸ್ವಯಂಚಾಲಿತ ಗಣಕೀಕೃತ ಚಾಲನಾ ಪಥದಲ್ಲಿ ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳಿಗೆ ಅನುಜ್ಞಾಪತ್ರ ನೀಡಲಾಗುತ್ತಿದೆ. ಸದರಿ ವ್ಯವಸ್ಥೆಯಡಿ ಚಾಲನಾ ಅನುಜ್ಞಾಪತ್ರ ನೀಡುವ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿದ್ದು, ತಂತ್ರಜ್ಞಾನದ ನೆರವಿನಿಂದ ಕರಾರುವಕ್ಕಾಗಿ ಚಾಲಕರ ಕ್ಷಮತೆಯನ್ನು ಪರೀಕ್ಷಿಸಬಹುದಾಗಿದೆ. ಅದರಂತೆ, ರಾಜ್ಯದ ಮಂಗಳೂರು, ಬೆಳಗಾವಿ, ರಾಯಚೂರು, ಹಾಸನ, ಧಾರವಾಡ ಮತ್ತು ಶಿವಮೊಗ್ಗ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಸ್ವಯಂ ಚಾಲಿತ ಗಣಕೀಕೃತ ಚಾಲನಾ ಪರೀಕ್ಷಾ ಪಥ ನಿರ್ಮಾಣ ಪ್ರಕ್ರಿಯೆ ಜಾರಿಯಲ್ಲಿದೆ. |
| (ಇ) | ವಾಹನ ಚಾಲನಾ ಪರವಾನಗಿಗಳನ್ನು ದಲ್ಲಾಳಿಗಳ ಮೂಲಕ ನೀಡಲಾಗುತ್ತಿರುವುದರಿಂದ ತರಬೇತಿಯಿಲ್ಲದ ವಾಹನ ಚಾಲಕರು ಪರವಾನಗಿ ಪಡೆಯಲಾಗುತ್ತಿರುವುದರಿಂದ ಈ ಕುರಿತಾಗಿ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ? | ಚಾಲನಾ ಪರವಾನಗಿ ನೀಡುವಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದಂತೆ ನೋಡಿಕೊಳ್ಳಲಾಗುತ್ತಿದೆ. ಚಾಲನಾ ಅನುಜ್ಞಾಪತ್ರ ನೀಡುವ ಸಂಪೂರ್ಣ ವ್ಯವಸ್ಥೆ ಗಣಕೀಕೃತವಾಗಿದ್ದು, ಪಾರದರ್ಶಕತ್ವ ಸ್ಥಾಪಿಸುವಿಕೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಟಿಡಿ 75 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.